## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಶ್ರೀಮತಿ ಪುಷ್ಪಾ ಎಂ. ಕಮ್ಮಾರ, ಹಿಂದಿನ ಕಾನಿಅ ತಾಪಂ. ಸೊರಬ, ಶಿವಮೊಗ್ಗ ಜಿಲ್ಲೆ ಮತ್ತು ಇತರರ ವಿರುದ್ಧದ ಇಲಾಖಾ ವಿಚಾರಣೆ ಬಗ್ಗೆ

ಓದಲಾಗಿದೆ:1. ಮಾನ್ಯ ಉಪ ಲೋಕಾಯುಕ್ತರು-2, ರವರ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿ ಸಲ್ಲಿಸಿರುವ ವರದಿ ದಿ:05-06-2015.

2. ಸಹಾಯಕ ನಿಬಂಧಕರು, ಕಾನೂನು ಸಲಹೆ-1, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೆಂಟ್/ ಉಪಲೋಕ್/ಬಿಡಿ/226/ 2011/ಎಆರ್‌ಎಲ್‌ಓ-1 ದಿನಾಂಕ:10-06-2015.

------

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದ ಜೊತೆಗೆ ಸಹಾಯಕ ನಿಬಂಧಕರು, ಕಾನೂನು ಸಲಹೆ-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪ ಲೋಕಾಯುಕ್ತ-2 ರವರ ಕಲಂ 12(3) ರ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತ-2 ರವರ ವರದಿಯನ್ವಯ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ಕೋರಿರುತ್ತಾರೆ.

ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಬಿಳುವಾಣಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸುತ್ತಕೋಟೆ ಗ್ರಾಮದ ವಡ್ಡಿನಕೆರೆ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ಪಡೆದು ಸದರಿ ಕಾಮಗಾರಿಯನ್ನು ಮಾಡದೇ ಕಾಮಗಾರಿಗೆ ನಿಗದಿಯಾಗಿದ್ದ ಹಣವನ್ನು ಈ ಕೆಳಕಂಡವರು ಡ್ರಾ ಮಾಡಿಕೊಂಡು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಶ್ರೀ ಮಲ್ಲಿಕಾರ್ಜುನಪ್ಪ, ಬಿನ್ ಚಂದ್ರಶೇಖರಪ್ಪ ಬಿಲವಾಣಿ ಅಂಚೆ ಸೊರಬ ತಾಲ್ಲೂಕು ಶಿವಮೊಗ್ಗ ಜಿಲ್ಲೆ ಇವರು ಲೋಕಾಯುಕ್ತ ಕಛೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

1. ಶ್ರೀ ಚೂಡಾಮಣಿ, ಕಾರ್ಯದರ್ಶಿ, ಬಿಳುವಾಣಿ ಗ್ರಾಮ ಪಂಚಾಯತಿ, ಸೊರಬ ತಾಲ್ಲೂಕು
2. ಶ್ರೀ ಶಿವಾಜಿ ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತಿ,
3. ಕಾನಿಅ ತಾಪಂ
4. ಶ್ರೀ ಸುರೇಂದ್ರ ಬಿನ್ ಚಂದ್ರಶೇಖರಪ್ಪ, ಸದಸ್ಯರು ಗ್ರಾಪಂ. ಬಿಳುವಾಣಿ
5. ಶ್ರೀಮತಿ ಬಂಗಾರಮ್ಮ, ಹಿಂದಿನ ಅಧ್ಯಕ್ಷರು, ಗ್ರಾಪಂ. ಬಿಳುವಾಣಿ

ಸದರಿ ದೂರಿನ ಬಗ್ಗೆ ತನಿಖೆಯನ್ನು ಕೈಗೊಂಡು ವರದಿ ಸಲ್ಲಿಸಲು ಲೋಕಾಯುಕ್ತ ಕಛೇರಿಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ ಇವರನ್ನು ಕೋರಲಾಗಿ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು-2 ಇವರು ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಬಿಳುವಾಣಿ , ವಡ್ಡಿನಕಟ್ಟೆ ಕೆರೆ ಕಾಮಗಾರಿಯನ್ನು ಮಾಡಿ ಸುತ್ತಕೋಟೆ' ವಡ್ಡಿನಕೆರೆಯ ಕಾಮಗಾರಿ ಶೀರ್ಷಿಕೆಯಡಿ ದಾಖಲೆಗಳನ್ನು ತಯಾರಿಸಿಕೊಂಡು ವೆಚ್ಚವನ್ನು ಭರಿಸಿ ಮೇಲಿನ ಕ್ರಮ ಸಂಖ್ಯೆ 1, 2 ಮತ್ತು ಶ್ರೀಮತಿ ಪುಷ್ಪಾ ಎಂ. ಕಮ್ಮಾರ ಹಿಂದಿನ ಕಾನಿಅ ತಾಪಂ ಸೊರಬ ಹಾಗೂ ಶ್ರೀ ಸಿದ್ದನಗೌಡ ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ ರವರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಆದ್ದರಿಂದ ಸದರಿ ಪ್ರಕರಣಕ್ಕೆ ಶ್ರೀಮತಿ ಪುಷ್ಪಾ ಎಂ. ಕಮ್ಮಾರ ಹಿಂದಿನ ಕಾನಿಅ ತಾಪಂ ಸೊರಬ ಹಾಗೂ ಶ್ರೀ ಸಿದ್ದನಗೌಡ ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ ರವರನ್ನು 6,7 ನೇ ಅಪಾದಿತರನ್ನಾಗಿ ಸೇರಿಸಲಾಯಿತು.

ದೂರು ಮತ್ತು ತನಿಖಾಧಿಕಾರಿಗಳ ವರದಿಯ ಬಗ್ಗೆ 1, 2, 6 ಮತ್ತು 7ನೇ ಅಪಾದಿತರ ಉತ್ತರವನ್ನು ಕೇಳಲಾಗಿ ಅವರು ನೀಡಿರುವ ಉತ್ತರ ದೂರಿನ ಸಂಗತಿಗಳು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ ಅವರ ವಿರುದ್ಧದ ನಡವಳಗಳನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿರುವುದಿಲ್ಲ.

ತನಿಖಾ ವರದಿಯ ಪ್ರಕಾರ 3, 4, ಮತ್ತು 5ನೇ ಆಪಾದಿತರ ವಿರುದ್ಧ ಯಾವುದೇ ಕರ್ತವ್ಯಲೋಪ ಕಂಡು ಬಾರದೆ ಇದ್ದುದರಿಂದ ಅವರ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

ಕಡತದಲ್ಲಿನ ಸಂಗತಿಗಳು ಹಾಗೂ ದಾಖಲಾತಿಗಳಿಂದ ಈ ಕೆಳಕಂಡ ಅಧಿಕಾರಿ/ನೌಕರರು ತಮ್ಮ ಕರ್ತವ್ಯದಲ್ಲಿ ವಿಫಲರಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ರ ನಿಯಮ 3(1) ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

1. ಶ್ರೀ ಚೂಡಾಮಣಿ, ಕಾರ್ಯದರ್ಶಿ, ಬಿಳುವಾಣಿ ಗ್ರಾಮ ಪಂಚಾಯತಿ, ಸೊರಬ ತಾಲ್ಲೂಕು
2. ಶ್ರೀ ಶಿವಾಜಿ ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತಿ,
3. ಶ್ರೀಮತಿ ಪುಷ್ಪಾ ಎಂ. ಕಮ್ಮಾರ ಹಿಂದಿನ ಕಾನಿಅ ತಾಪಂ ಸೊರಬ
4. ಶ್ರೀ ಸಿದ್ದನಗೌಡ ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ

ಆದ್ದರಿಂದ ಕ್ರಮ ಸಂಖ್ಯೆ (4) ರ ಶ್ರೀ ಸಿದ್ದನಗೌಡ, ಇವರು ಈಗಾಗಲೇ ನಿವೃತ್ತಿಯಾಗಿರುವುದರಿಂದ ಕೆಸಿಎಸ್‌ಆರ್ ನಿಯಮ 214 (2)(ಬಿ) (i) ರಡಿ ಇಲಾಖಾ ವಿಚಾರಣೆಗೆ ಅನುಮತಿ ನೀಡುವಂತೆ ಹಾಗೂ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರನ್ವಯ ಲೋಕಾಯುಕ್ತ ಪ್ರಾಧಿಕಾರಕ್ಕೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ-2 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ ಎಂದು ಸಹಾಯಕ ನಿಬಂಧಕರು, ಕಾನೂನು ಸಲಹೆ-1 ಇವರು ದಿನಾಂಕ:10-06-2015 ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ-2 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ದಿ.5-6-2015 ರ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಮೇಲ್ಕಂಡ ಅಧಿಕಾರಿ/ನೌಕರರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಕಾರಣ, ಶ್ರೀ ಸಿದ್ದನಗೌಡ, ಇವರು ಈಗಾಗಲೇ ನಿವೃತ್ತಿಯಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958 ರ ನಿಯಮ 214 (2)(ಬಿ) (i) ರಡಿ ಇಲಾಖಾ ವಿಚಾರಣೆಗೆ ಅನುಮತಿ ನೀಡಲು ಹಾಗೂ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರನ್ವಯ

ಮಾನ್ಯ ಉಪ ಲೋಕಾಯುಕ್ತ-2 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 161 ವಿಸೇಬಿ 2015 ಬೆಂಗಳೂರು ದಿನಾಂಕ: 16-07-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಸಿದ್ದನಗೌಡ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ ಇವರು ಈಗಾಗಲೇ ನಿವೃತ್ತಿಯಾಗಿರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958 ರ ನಿಯಮ 214 (2)(ಬಿ) (i) ರಡಿ ಅನುಮತಿ ನೀಡಿದೆ. ಹಾಗೂ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ದುರ್ನಡತೆಗೆ ಸಂಬಂಧಿಸಿದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 11 ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು, ಪ್ರಕರಣವನ್ನು ಸದರಿ ನಿಯಮಾವಳಿಗಳ ನಿಯಮ 14(ಎ)ರನ್ವಯ ಮಾನ್ಯ ಉಪ ಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರಿಗೆ ವಹಿಸಿ ಆದೇಶಿಸಿದೆ.

1. ಶ್ರೀ ಚೂಡಾಮಣಿ, ಕಾರ್ಯದರ್ಶಿ, ಬಿಳುವಾಣಿ ಗ್ರಾಮ ಪಂಚಾಯತಿ, ಸೊರಬ ತಾಲ್ಲೂಕು
2. ಶ್ರೀ ಶಿವಾಜಿ ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತಿ,
3. ಶ್ರೀಮತಿ ಪುಷ್ಪಾ ಎಂ. ಕಮ್ಮಾರ ಹಿಂದಿನ ಕಾನಿಅ ತಾಪಂ ಸೊರಬ
4. ಶ್ರೀ ಸಿದ್ದನಗೌಡ ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಿಲ್ಲಾ ಪಂಚಾಯತಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ &ಸಿ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸಹಾಯಕ ನಿಬಂಧಕರು, ಕಾನೂನು ಸಲಹೆ-1 ಮಾನ್ಯ ಕರ್ನಾಟಕ ಲೋಕಾಯುಕ್ತ ರವರ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ

**ಪ್ರತಿಗಳು ಮಾಹಿತಿಗಾಗಿ :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.